**ಪತ್ರಿಕಾ ಪ್ರಕಟಣೆ**

# ಭಾರತದಲ್ಲಿ ಹವಾಮಾನ ಉಪಕ್ರಮದಲ್ಲಿ ನಾಯಕರಾಗಲು ನಗರ ವೃತ್ತಿಪರರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ 'ಹವಾಮಾನ ಬದಲಾವಣೆ ನಿರ್ವಹಣಾ ಕಾರ್ಯಕ್ರಮದಲ್ಲಿ ನಾಯಕರು' ಕಾರ್ಯಕ್ರಮ ಘೋಷಣೆ ಮಾಡಿದ `ಎನ್‌ಐಯುಎ' ಮತ್ತು `ಡಬ್ಲ್ಯು.ಆರ್.ಐ. ಇಂಡಿಯಾ'

- *ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯು 'ಎಲ್.ಸಿ.ಸಿ.ಎಂ.'ನ ಮುಖಾಮುಖಿ ಕಲಿಕಾ ಮಾಡ್ಯೂಲ್‌ಗಳನ್ನು ಜಾರಿಗೊಳಿಸಿದ ಮೊದಲ ವಿತರಣಾ ಪಾಲುದಾರನಾಗಿದೆ*
- *2027ರ ವೇಳೆಗೆ ಹವಾಮಾನ ಬದಲಾವಣೆ ಹೊಂದಾಣಿಕೆ ಮತ್ತು ತಗ್ಗಿಸುವಿಕೆಯಲ್ಲಿ 5,000 ನಗರ ನಾಯಕರಲ್ಲಿ ಸಾಮರ್ಥ್ಯವನ್ನು ನಿರ್ಮಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ*

**ನವದೆಹಲಿ, ಜೂನ್ 6, 2022**: ಜೂನ್ 5ರಂದು ಆಚರಿಸಲಾದ 'ವಿಶ್ವ ಪರಿಸರ ದಿನಾಚರಣೆ'ಯ ಸಂದರ್ಭದಲ್ಲಿ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಅಫೇರ್ಸ್'(ಎನ್.ಐ.ಯು.ಎ) ಮತ್ತು 'ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್' ಇಂಡಿಯಾ' (ಡಬ್ಲ್ಯೂ.ಆರ್.ಐ) ಜಂಟಿಯಾಗಿ **'ಹವಾಮಾನ ಬದಲಾವಣೆ ನಿರ್ವಹಣೆಯಲ್ಲಿ ನಾಯಕರು'** (ಎಲ್.ಸಿ.ಸಿ.ಎಂ) ಎಂಬ ಅಭ್ಯಾಸ ಆಧಾರಿತ ಕಲಿಕಾ ಕಾರ್ಯಕ್ರಮವನ್ನು ಘೋಷಿಸಿವೆ. ಈ ಮುಖಾಮುಖಿ ಕಲಿಕಾ ಕಾರ್ಯಕ್ರಮವನ್ನು ಜಾರಿಗೊಳಿಸಲು, ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯು(ಎ.ಟಿ.ಐ) ಇಂದು 'ಎನ್.ಐ.ಯು.ಎ' ಮತ್ತು 'ಡಬ್ಲ್ಯು.ಆರ್.ಐ ಇಂಡಿಯಾ' ಜೊತೆ ತ್ರಿಪಕ್ಷೀಯ ತಿಳುವಳಿಕಾ ಒಡಂಬಡಿಕೆಗೆ (ಎಂ.ಒ.ಯು) ಸಹಿ ಹಾಕಿದೆ. ಆ ಮೂಲಕ ಸಂಸ್ಥೆಯು 'ಎಲ್.ಸಿ.ಸಿ.ಎಂ' ಕಾರ್ಯಕ್ರಮದ ಮೊದಲ ವಿತರಣಾ ಪಾಲುದಾರನಾಗಿ ಹೊರಹೊಮ್ಮಿದೆ.

ಮಧ್ಯಮದಿಂದ ಕಿರಿಯ ಮಟ್ಟದ ಸರಕಾರಿ ಅಧಿಕಾರಿಗಳು ಮತ್ತು ಮುಂಚೂಣಿ ಕಾರ್ಯಕರ್ತರು ಸೇರಿದಂತೆ 5,000 ವೃತ್ತಿಪರರ ಸಾಮರ್ಥ್ಯ ವೃದ್ಧಿ ಮಾಡಿ, ಭಾರತದ ಹವಾಮಾನ ಬದ್ಧತೆಗಳನ್ನು ಸಾಧಿಸಲು ಸಂಘಟಿತ ಪ್ರಯತ್ನದ ಭಾಗವಾಗಿ ಹವಾಮಾನ ಬದಲಾವಣೆಯ ಹೊಂದಾಣಿಕೆಯಲ್ಲಿ ಅವರನ್ನು ಮುಂಚೂಣಿ ನಾಯಕರನ್ನಾಗಿಸುವುದು ಹಾಗೂ ಉಪಶಮನ ಪರಿಹಾರಗಳನ್ನು ಎತ್ತಿಹಿಡಿಯಲು ಅವರನ್ನು ಸಿದ್ಧಪಡಿಸುವುದು 'ಎಲ್.ಸಿ.ಸಿ.ಎಂ' ಕಾರ್ಯಕ್ರಮದ ಉದ್ದೇಶವಾಗಿದೆ. ಇದರ ಉದ್ಘಾಟನೆಯು ಭಾರತದ ನಗರ ಹವಾಮಾನ ಗುರಿಗಳ ವಿಚಾರವಾಗಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಸಾಧನೆಗಳನ್ನು ಸಹ ಎತ್ತಿ ಹಿಡಿದಿದೆ.

ಭಾರತೀಯ ನಗರಗಳಲ್ಲಿನ ಹವಾಮಾನ ನಾಯಕರ ಸಾಮರ್ಥ್ಯವನ್ನು ಹೆಚ್ಚಿಸಲು ಕಲಿಕಾ ಕಾರ್ಯಕ್ರಮ ಮತ್ತು ಅರ್ಧ ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ **ಶ್ರೀ ಹರ್ದೀಪ್ ಸಿಂಗ್ ಪುರಿ** ಅವರು *"ನಿನ್ನೆ ವಿಶ್ವ ಪರಿಸರ ದಿನವನ್ನು ಆಚರಿಸಿದ ತಕ್ಷಣವೇ ನಾವು (ಎಲ್.ಎಲ್.ಸಿ.ಎಂ)*

*ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿರುವುದು ಅತ್ಯಂತ ಸೂಕ್ತ ಮತ್ತು ಸಮಯೋಚಿತವಾಗಿದೆ. ಈ ಕಾರ್ಯಕ್ರಮವು ಹವಾಮಾನ ಬದಲಾವಣೆಯನ್ನು ಎದುರಿಸಲು ಮಾತ್ರವಲ್ಲದೆ, ನಮ್ಮ ಆರ್ಥಿಕ ಪರಿಸ್ಥಿತಿಗಳನ್ನು ಪೂರೈಸುವ ಸುಸ್ಥಿರ ಅಭಿವೃದ್ಧಿಯ ಹೊಸ ಮಾರ್ಗವನ್ನು ನಿರ್ಮಿಸಲು ಸರಕಾರದ ಮಧ್ಯಸ್ಥಿಕೆಗಳ ಸುದೀರ್ಘ ಸಾಲಿನಲ್ಲಿ ಮತ್ತೊಂದು ಉಪಕ್ರಮವೆನಿಸಿದೆ," ಎಂದರು.*

ಕಳೆದ ವರ್ಷ ಹವಾಮಾನ ಶೃಂಗಸಭೆಯಲ್ಲಿ ('ಸಿಒಪಿ 26), ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಾಗತಿಕ ನಾಯಕರಿಗೆ *'ಪಂಚ ಅಮೃತ್'* ಎಂಬ ಐದು ಆಯಾಮಗಳ ಕಾರ್ಯತಂತ್ರವನ್ನು ಪ್ರಸ್ತಾಪಿಸಿದರು. ಆ ಮೂಲಕ 1.5 ಡಿಗ್ರಿ ಸೆಲ್ಸಿಯಸ್ ಗುರಿ ತಲುಪಲು ಭಾರತದ ಸಹಕಾರವನ್ನು ವಿಸ್ತರಿಸಿದರು. 'ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮ (ಯುಎನ್ಇಪಿ) ಮತ್ತು 'ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್ (ಐಎಸ್‌ಬಿ) ಸಹಭಾಗಿತ್ವದಲ್ಲಿ ವಿನ್ಯಾಸಗೊಳಿಸಲಾದ ಮತ್ತು ಅನುಷ್ಠಾನಗೊಳಿಸಲಾದ 'ಎಲ್.ಸಿ.ಸಿ.ಎಂ ಕಾರ್ಯಕ್ರಮವು ಈ ಗುರಿಯನ್ನು ಸಾಧಿಸುವ ನಟ್ಟಿನಲ್ಲಿ ಭಾರತದ ಕಾರ್ಯಪಡೆಯನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ.

ಹವಾಮಾನಕ್ಕೆ ಸಂಬಂಧಿಸಿದಂತೆ ತಮ್ಮ ಕೆಲಸಗಳಲ್ಲಿ ಪರಿಣಾಮಕಾರಿತ್ವ ಹೆಚ್ಚಳಕ್ಕಾಗಿ ಕೌಶಲ್ಯ ವೃದ್ಧಿ ಬಯಸುವ ಮತ್ತು ತಮ್ಮನ್ನು ತಾವು ಸಜ್ಜುಗೊಳಿಸಿಕೊಳ್ಳಲು ಬಯಸುವ ನಗರದ ಕಾರ್ಯಕರ್ತರನ್ನು ದೃಷ್ಟಿಯಲ್ಲಿರಿಸಿಕೊಂಡು ರೂಪಿಸಲಾದ ಸಂಯೋಜಿತ ಕಲಿಕಾ ಕಾರ್ಯಕ್ರಮವೇ - 'ಎಲ್.ಸಿ.ಸಿ.ಎಂ'. ಈ ಕಾರ್ಯಕ್ರಮವು ನಾಲ್ಕು ಹಂತಗಳನ್ನು ಹೊಂದಿದೆ: ಮೊದಲ ಹಂತವು ಎಂಟು ವಾರಗಳಲ್ಲಿ ಪೂರ್ಣಗೊಳಿಸಬಹುದಾದ ಆನ್‌ಲೈನ್ ಕಲಿಕಾ ಮಾಡ್ಯೂಲ್ ಆಗಿದೆ; ಮುಂದಿನದು ನಾಲ್ಕರಿಂದ ಆರು ದಿನಗಳ ಕಾಲ ನಡೆಯುವ ಮುಖಾಮುಖಿ ಅಧಿವೇಶನಗಳನ್ನು ಒಳಗೊಂಡಿದೆ; ಮೂರನೇ ಹಂತದ ಅಡಿಯಲ್ಲಿ ಅಭ್ಯರ್ಥಿಗಳು ಆರರಿಂದ ಎಂಟು ತಿಂಗಳುಗಳಲ್ಲಿ ಒಂದು ಯೋಜನೆಯನ್ನು ಪೂರ್ಣಗೊಳಿಸುವುದು ಮತ್ತು ಪ್ರತ್ಯಕ್ಷ ಅನುಭವದ ಸ್ಥಳಗಳಿಗೆ ಹಾಜರಾಗುವುದು ಕಡ್ಡಾಯವಾಗಿದೆ; ಮತ್ತು ಅಂತಿಮ ಹಂತವು ಸಂಪರ್ಕಜಾಲ ವೃದ್ಧಿ ಮತ್ತು ಕಾರ್ಯಕರ್ತರ ಸಮುದಾಯದ ಸ್ಥಾಪನೆಯನ್ನು ಒಳಗೊಂಡಿದೆ.

'ಎನ್.ಐ.ಯು.ಎ.'ನ ಸಾಮರ್ಥ್ಯ ವರ್ಧನೆಯ ಅಂಗವಾದ 'ನ್ಯಾಷನಲ್ ಅರ್ಬನ್ ಲರ್ನಿಂಗ್ ಪ್ಲಾಟ್‌ಫಾರಂ'(ಎನ್.ಯು.ಎಲ್.ಪಿ)ನಲ್ಲಿ ಆನ್‌ಲೈನ್ ಕಲಿಕೆಯನ್ನು ಆಯೋಜಿಸಲಾಗುತ್ತದೆ. ಮೈಸೂರಿನ ಎ.ಟಿ.ಐ ಸಹ ಇದನ್ನು ಆಯೋಜಿಸುತ್ತದೆ ಮತ್ತು ಬೆಂಬಲಿಸುತ್ತದೆ. ಮುಂದಿನ ಕೆಲವು ತಿಂಗಳುಗಳಲ್ಲಿ ಭಾರತದಾದ್ಯಂತ 'ಎ.ಟಿ.ಐ.'ಗಳೊಂದಿಗೆ ಇದೇ ರೀತಿಯ ತಿಳುವಳಿಕಾ ಒಡಂಬಡಿಕೆಗಳಿಗೆ ಸಹಿ ಹಾಕುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ.

ನಗರ ಪರಿಸರ ವಲಯದಲ್ಲಿ 'ಎನ್.ಐ.ಯು.ಎ' ಸಾಧಿಸಿದ ಮತ್ತೊಂದು ಮೈಲಿಗಲ್ಲನ್ನು ಆಚರಿಸಲು ಶ್ರೀ ಪುರಿ ಅವರು 'ಹವಾಮಾನ ದತ್ತಾಂಶ ವೀಕ್ಷಣಾಲಯ 2.0 ವೆಬ್‌ಸೈಟ್', 'ನಾಲೆಡ್ಜ್ ಪ್ರಾಡಕ್ಟ್ ಆನ್ ಪಬ್ಲಿಕ್ ಪ್ಲೇಸಸ್'; 'ಅರ್ಬನ್

ಔಟ್‌ಕಮ್ಸ್ ಫ್ರೇಮ್‌ವರ್ಕ್ 2022- ದತ್ತಾಂಶ ಸಂಗ್ರಹ ಪೋರ್ಟಲ್' ಮತ್ತು ನಗರ ಸಾರಿಗೆ ಉಪಕ್ರಮಗಳಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಗೆ ಚಾಲನೆ ನೀಡಿದರು. 'ರಾಷ್ಟ್ರೀಯ ಹವಾಮಾನ ಛಾಯಾಗ್ರಹಣ ಪ್ರಶಸ್ತಿ ವಿಜೇತರು ಮತ್ತು 'ಟ್ರಾನ್ಸ್‌ಪೋರ್ಟ್ ಫಾರ್ ಆಲ್ ಇನ್ನೋವೇಷನ್ ಚಾಲೆಂಜ್'ನ ಮೊದಲ ಹಂತದ ಅರ್ಹತಾ ನಗರಗಳನ್ನು ಸಹ ಘೋಷಿಸಲಾಯಿತು.

ತಮ್ಮ ಮುಖ್ಯ ಭಾಷಣದಲ್ಲಿ, **ಶ್ರೀ ಪುರಿ** ಅವರು, *"ಕಳೆದ ಎಂಟು ವರ್ಷಗಳಲ್ಲಿ, ಮೋದಿ ಸರಕಾರವು ಸುಸ್ಥಿರತೆಯ ಕಾರ್ಯಸೂಚಿಯನ್ನು ಮುಂದಕ್ಕೆ ಕೊಂಡೊಯ್ಯುವಲ್ಲಿ ಅನೇಕ ದೃಢವಾದ ಕ್ರಮಗಳನ್ನು ಕೈಗೊಂಡಿದೆ. ಗ್ಲ್ಯಾಸ್ಗೋದ ಹವಾಮಾನ ಶೃಂಗಸಭೆಯಲ್ಲಿ (ಸಿಒಪಿ 26 ) 'ಪಂಚ ಅಮೃತ್ ' ಕ್ರಿಯಾ ಯೋಜನೆಯ ಮೂಲಕ ಹವಾಮಾನ ಬದಲಾವಣೆಯ ಬಗ್ಗೆ ಭಾರತದ ವಿಸ್ತೃತ ಕಾರ್ಯಸೂಚಿಯನ್ನು ಪ್ರಧಾನಿ ಘೋಷಿಸಿದರು, ಇದರ ಭಾಗವಾಗಿ 2070ರ ವೇಳೆಗೆ ಭಾರತವು ನಿವ್ವಳ-ಶೂನ್ಯ ಹೊರಸೂಸುವಿಕೆಯ ದೇಶವಾಗಿ ರೂಪುಗೊಳ್ಳುವ ನಿರೀಕ್ಷೆಯಿದೆ,''* ಎಂದು ಹೇಳಿದರು.

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ **ಶ್ರೀ ಮನೋಜ್ ಜೋಶಿ** (ಐಎಎಸ್) ಅವರು, *ಕಳೆದ ಎಂಟು ವರ್ಷಗಳಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ, ಸ್ಮಾರ್ಟ್ ಸಿಟಿ ಮಿಷನ್, ನಗರ ಸಾರಿಗೆ ಮತ್ತು ಅಮೃತ್, ಸ್ವಚ್ಛ ಭಾರತ್ ಯೋಜನೆಯಂತಹ ಭಾರತೀಯ ನಗರ ಯೋಜನೆಗಳ ಮೂಲಕ 'ಭವಿಷ್ಯ ಸನ್ನದ್ಧ' ಭಾರತಕ್ಕಾಗಿ ಸುಮಾರು 16 ಲಕ್ಷ ಕೋಟಿ ರೂ.ಗಳ ಹೂಡಿಕೆ ಮಾಡಲಾಗಿದೆ ಎಂದು ಹೇಳಿದರು. 'ಎಲ್.ಸಿ.ಸಿ.ಎಂ' ಕಾರ್ಯಕ್ರಮದ ಮೂಲಕ, ನಾವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಫಲಪ್ರದ ಸಹಯೋಗಗಳನ್ನು ಹೊಂದಲು ಮತ್ತು ಹವಾಮಾನ ಬದಲಾವಣೆಯನ್ನು ತಗ್ಗಿಸುವ ನಿಟ್ಟಿನಲ್ಲಿ ಸಾಮೂಹಿಕವಾಗಿ ಕಾರ್ಯನಿರ್ವಹಿಸಲು ಎದುರು ನೋಡುತ್ತಿದ್ದೇವೆ ಎಂದು ಹೇಳಿದರು.*

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ **ಶ್ರೀ ಕುನಾಲ್ ಕುಮಾರ್** (ಐಎಎಸ್) ಅವರು, *ಈ ಗುರಿಗಳನ್ನು ಸಾಧಿಸಲು ನಾವು ನಾವೀನ್ಯತೆ, ಭಾಗವಹಿಸುವಿಕೆ, ತಂತ್ರಜ್ಞಾನ, ಸಂಯೋಜನೆ ಮತ್ತು ಸಾಮರ್ಥ್ಯವೃದ್ಧಿಯನ್ನು ಸಾಧಿಸುವ ಅಗತ್ಯವಿದೆ. ಸ್ಮಾರ್ಟ್ ಸಿಟಿ ಮಿಷನ್ ಸೇರಿದಂತೆ ಭಾರತ ಸರಕಾರದ ವಿವಿಧ ಯೋಜನೆಗಳ ಮೂಲಕ ನಾವು ಈಗಾಗಲೇ ಈ ಪ್ರಯಾಣವನ್ನು ಪ್ರಾರಂಭಿಸಿದ್ದೇವೆ. ಫ್ರೆಂಚ್ ಡೆವಲಪ್‌ಮೆಂಟ್ ಏಜೆನ್ಸಿ (ಎಎಫ್‌ಡಿ), ಯುರೋಪಿಯನ್ ಒಕ್ಕೂಟ ಮತ್ತು 'ಎನ್.ಐ.ಯು.ಎ' ಸಹಯೋಗದೊಂದಿಗೆ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನಗರ ಆವಿಷ್ಕಾರ ಕಾರ್ಯವಿಧಾನದ ಭಾಗವಾಗಿ 'ನಗರ ನಾವೀನ್ಯತೆ, ಸಮಗ್ರತೆ ಮತ್ತು ಸುಸ್ಥಿರತೆಗಾಗಿ ನಗರ ಹೂಡಿಕೆ'(ಸಿ.ಐ.ಟಿ.ಐ.ಐ.ಎಸ್) ಎಂಬ ಉಪಕ್ರಮವನ್ನು ಪ್ರಾರಂಭಿಸಿತು. ಪರಿಸರ ಮತ್ತು ಸಾಮಾಜಿಕ ರಕ್ಷಣೆಗಳು ಸೇರಿದಂತೆ ನಗರ ವಲಯದಾದ್ಯಂತ ಯೋಜನಾ ನಿರ್ವಹಣಾ ಸಾಧನಗಳು ಮತ್ತು ಚೌಕಟ್ಟುಗಳನ್ನು ಈ ಕಾರ್ಯಕ್ರಮವು ಅಭಿವೃದ್ಧಿಪಡಿಸಿದೆ. ಹವಾಮಾನ ಬದಲಾವಣೆ ನಿರ್ವಹಣೆಯಲ್ಲಿ ನಾಯಕರು (ಎಲ್.ಸಿ.ಸಿ.ಎಂ) ಕಾರ್ಯಕ್ರಮವನ್ನು 'ಸಿ.ಐ.ಟಿ.ಐ.ಐ.ಎಸ್ ಕಾರ್ಯಕ್ರಮದೊಂದಿಗೆ ಸಂಪರ್ಕಿಸಲಾಗಿದೆ. ಎಲ್.ಸಿ.ಸಿ.ಎಂ. ಕಾರ್ಯಕ್ರಮದ ಮೊದಲ ಗುಂಪಿನಲ್ಲಿ 12 ನಗರಗಳ ಸ್ಪರ್ಧಿಗಳು 'ಸಿ.ಐ.ಟಿ.ಐ.ಐ.ಎಸ್ ಕಾರ್ಯಕ್ರಮದ*

WRI INDIA | Smart City | NIUA National Institute of Urban Affairs | UN environment programme 50 1972-2022 | ISB

ಅಡಿಯಲ್ಲಿ ಸಹಾಯವನ್ನು ಪಡೆಯಲಿದ್ದಾರೆ. 'ಎಲ್.ಸಿ.ಸಿ.ಎಂ.' ಕಾರ್ಯಕ್ರಮವು ಸಾಮರ್ಥ್ಯ-ವರ್ಧನೆಯ ಅಂಗವಾಗಿ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಇದು 'ಸಿ.ಐ.ಟಿ.ಐ.ಐ.ಎಸ್-2.0'ನ ಅವಿಭಾಜ್ಯ ಅಂಗವಾಗಲಿದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಎಟಿಐ ಮೈಸೂರು ವಿಭಾಗದ ಡಿಜಿ **ಶ್ರೀಮತಿ ವಿ. ಮಂಜುಳ** ಅವರು ಮಾತನಾಡಿ, ಸುಸ್ಥಿರ ಅಭಿವೃದ್ಧಿ ಗುರಿಗಳಿಗಾಗಿ ಸ್ಥಾಪಿತ ಕೇಂದ್ರ ಹೊಂದಿರುವ ಕರ್ನಾಟಕದ ಪ್ರಮುಖ ತರಬೇತಿ ಸಂಸ್ಥೆಯಾಗಿ ನಾವು ಈ ಕಾರ್ಯಕ್ರಮದಲ್ಲಿ ಅನುರಣನೆಯನ್ನು ಕಾಣುತ್ತೇವೆ. ಈ ಸಹಯೋಗ ಮತ್ತು ಈ ಪ್ರಕ್ರಿಯೆಯಲ್ಲಿ ಗಳಿಸಿದ ಅನುಭವವನ್ನು ನಾವು 'ಎಲ್.ಸಿ.ಸಿ.ಎಂ.'ನಲ್ಲಿ ವ್ಯಾಪಕವಾದ ರಾಜ್ಯ ಮಟ್ಟದ ತರಬೇತಿ ಪಾಲುದಾರ ಕಾರ್ಯಕ್ರಮವನ್ನು ಪ್ರಾರಂಭಿಸಲು ಉಡ್ಡಯನ ವೇದಿಕೆಯಾಗಿ ಬಳಸಿಕೊಳ್ಳಲು ಹಾಗೂ 'ಎಲ್.ಸಿ.ಸಿ.ಎಂ.'ನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಉತ್ಕೃಷ್ಟತೆಯ ಕೇಂದ್ರವಾಗಿ ಹೊರಹೊಮ್ಮಲು ನಾವು ಉದ್ದೇಶಿಸಿದ್ದೇವೆ," ಎಂದರು.

'ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅರ್ಬನ್ ಅಫೇರ್ಸ್'ನ ನಿರ್ದೇಶಕ **ಶ್ರೀ ಹಿತೇಶ್ ವೈದ್ಯ** ಅವರು ಮಾತನಾಡಿ, "ಭಾರತದಲ್ಲಿ ನಗರ ವಲಯಗಳಿಗೆ ಹೂಡಿಕೆಯ ದರವನ್ನು ಗಮನಿಸುವುದಾದರೆ(ಉದಾಹರಣೆಗೆ ಸ್ಮಾರ್ಟ್ ಸಿಟಿ ಕಾರ್ಯಕ್ರಮಕ್ಕೆ 30 ಶತಕೋಟಿ ಡಾಲರ್) ಸುಸ್ಥಿರ ಅಭಿವೃದ್ಧಿಯನ್ನು ಖಾತರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಭೌತಿಕ, ಸಾಮಾಜಿಕ ಮತ್ತು ಪರಿಸರ ಸೇವೆಗಳ ಕಡೆಗೆ ಹಾಲಿ ಮತ್ತು ಭವಿಷ್ಯದ ಹೂಡಿಕೆಗಳಲ್ಲಿ ಹವಾಮಾನ ಉಪಕ್ರಮವನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. 'ಎಲ್.ಸಿ.ಸಿ.ಎಂ.' ಮೂಲಕ 'ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅರ್ಬನ್ ಅಫೇರ್ಸ್' ಸಂಸ್ಥೆಯು ಹವಾಮಾನ ಬದಲಾವಣೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ, ನಗರ ಸಮಸ್ಯೆಗಳ ಕ್ರಿಯಾತ್ಮಕ ವಿಚಾರಗಳಲ್ಲಿ ಸಾಮರ್ಥ್ಯವೃದ್ಧಿ ಮತ್ತು ಜ್ಞಾನ ಪ್ರಸಾರದ ತನ್ನ ಗುರಿಯತ್ತ ಕೆಲಸ ಮಾಡಲಿದೆ," ಎಂದು ಹೇಳಿದರು.

'ಡಬ್ಲ್ಯು.ಆರ್.ಐ. ಇಂಡಿಯಾ'ದ ಸಿಇಒ **ಶ್ರೀ ಡಾ.ಒ.ಪಿ.ಅಗರ್ವಾಲ್ ಅವರು** ಮಾತನಾಡಿ, 'ಎಲ್.ಸಿ.ಸಿ.ಎಂ' ಕಾರ್ಯಕ್ರಮ, ಅದರ ರಚನೆ ಮತ್ತು ಭಾರತದಲ್ಲಿ ನಗರ ಹವಾಮಾನ ನಾಯಕತ್ವವನ್ನು ಉನ್ನತೀಕರಿಸುವ ಗುರಿಯನ್ನು ಪ್ರಸ್ತುತಪಡಿಸಿದರು. "ವೃತ್ತಿ ಜೀವನದ ಮಧ್ಯ ಭಾಗದಲ್ಲಿರುವ ವೃತ್ತಿಪರರ ಸಾಮರ್ಥ್ಯ ವೃದ್ಧಿಗೆ ಸರಿಯಾದ ರೀತಿಯ ಬೋಧನಾ ವಿಧಾನವನ್ನು ಬಳಸುವುದು ಪ್ರಮುಖ ಸವಾಲಾಗಿದೆ. ಕೇವಲ ಉಪನ್ಯಾಸಗಳನ್ನು ಕೇಳುವ ಬದಲು ಕಾರ್ಯಪ್ರವೃತ್ತರಾಗುವ ಮೂಲಕ ಕಲಿಕೆಯನ್ನು ಪ್ರೋತ್ಸಾಹಿಸುವ ಬೋಧನಾ ಶೈಲಿಯನ್ನು ಬಳಸಬೇಕಾಗಿದೆ. ಎಲ್.ಸಿ.ಸಿ.ಎಂ. ಇದನ್ನು ಸಂಪೂರ್ಣವಾಗಿ ಗುರುತಿಸಿದೆ ಮತ್ತು ಈ ರೀತಿಯ ಬೋಧನಾ ಶೈಲಿಯನ್ನು ಅಳವಡಿಸಿಕೊಂಡಿದೆ" ಎಂದು ಹೇಳಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಎನ್ಐಯುಎ ನಿರ್ದೇಶಕ ಶ್ರೀ ಹಿತೇಶ್ ವೈದ್ಯ ಅವರು ಅರ್ಧ ದಿನದ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದರು. ಅವರು ನಗರ ವಲಯದಲ್ಲಿ ಸಾಮರ್ಥ್ಯ ವರ್ಧನೆ ತರಬೇತಿಯನ್ನು

ರೂಪಿಸುವಲ್ಲಿ ಸಂಸ್ಥೆಯ ಪಾತ್ರದ ಬಗ್ಗೆ ಮಾತನಾಡಿದರು. 'ಭಾರತೀಯ ನಗರಗಳಲ್ಲಿನ ಹವಾಮಾನ ನಾಯಕತ್ವದ ಸಾಮರ್ಥ್ಯಗಳು' ಕುರಿತ ಪ್ಯಾನಲ್ ಚರ್ಚೆಯಲ್ಲಿ ಮೈಸೂರಿನ 'ಎ.ಟಿ.ಐ.' ಜಂಟಿ ಮಹಾನಿರ್ದೇಶಕರಾದ ಡಾ.ಬಿ.ಆರ್.ಮಮತ(ಐಎಎಸ್), 'ಎನ್.ಐ.ಯು.ಎ' ನಿರ್ದೇಶಕ ಶ್ರೀ ಹಿತೇಶ್ ವೈದ್ಯ; ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ಭಾರತದ ಮುಖ್ಯಸ್ಥರಾದ ಶ್ರೀ ಅತುಲ್ ಬಗೈ; ಶಕ್ತಿ ಸಸ್ಟೇನಬಲ್ ಎನರ್ಜಿ ಫೌಂಡೇಷನ್‌ನ ಸಿಇಒ ಅನ್ಶು ಭಾರದ್ವಜ್; ಅರ್ಬನ್ ಡೆವಲಪ್‌ಮೆಂಟ್ ಸೆಂಟರ್ ಆಂಡ್ ಲೀಡರ್‌ಶಿಪ್ ಡೆವಲಪ್‌ಮೆಂಟ್ ಸೆಂಟರ್, ಮಹಾತ್ಮಾ ಗಾಂಧಿ ಸ್ಟೇಟ್ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಮುಖ್ಯಸ್ಥರು ಮತ್ತು ಪ್ರೊಫೆಸರ್ ಡಾ. ರಾಜೀವ್ ಚಂಧಾ; 'ಡಬ್ಲ್ಯೂ.ಆರ್.ಐ. ಇಂಡಿಯಾ'ದ ನಗರ ಅಭಿವೃದ್ಧಿ ಕಾರ್ಯಕ್ರಮದ ನಿರ್ದೇಶಕ ಡಾ. ರಜೀತ್ ಮ್ಯಾಥ್ಯೂಸ್ ಸೇರಿದಂತೆ ಹಲವು ಉದ್ಯಮ ತಜ್ಞರು ಭಾಗವಹಿಸಿದ್ದರು. 'ಡಬ್ಲ್ಯೂ.ಆರ್.ಐ.ಇಂಡಿಯಾ'ದ ಸಿಇಒ ಡಾ.ಒ.ಪಿ.ಅಗರ್ವಾಲ್ (ನಿವೃತ್ತ ಐಎಎಸ್) ಅವರು ಚರ್ಚೆಯನ್ನು ನಡೆಸಿಕೊಟ್ಟರು.

***